# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಜಂಆ(ಕಂ)/ವಿನಿ-1/ಪಿಆರ್-01/2025-26

ಮುಖ್ಯ ಆಯುಕ್ತರವರ ಕಛೇರಿ
ನಗರ ಪಾಲಿಕೆ ಕಛೇರಿಗಳು
ಬೆಂಗಳೂರು, ದಿನಾಂಕ : 5.4.25

## ಸುತ್ತೋಲೆ

ವಿಷಯ : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ(SWM User Fee) ವನ್ನು 2025-26ನೇ ಆರ್ಥಿಕ ಸಾಲಿನಿಂದ ಆಸ್ತಿ ತೆರಿಗೆ ಜೊತೆಯಲ್ಲಿ ಸಂಗ್ರಹಿಸುವ ಕುರಿತು.

ಉಲ್ಲೇಖ :

1. ಘನ ಸರ್ಕಾರದ ಪತ್ರ ಸಂಖ್ಯೆ: ನಅಇ 500 ಎಂ.ಎನ್.ವೈ 2024(ಇ), ದಿನಾಂಕ: 04.03.2025.
2. ಮಾನ್ಯ ವಿಶೇಷ ಆಯುಕ್ತರು(ಕಂದಾಯ), ಬಿಬಿಎಂಪಿರವರ ಅರೇ ಸರ್ಕಾರಿ ಪತ್ರ ಸಂಖ್ಯೆ: 1/ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ(SWM User Fee)/2024-25, ದಿನಾಂಕ: 18.03.2025.
3. ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಬೆಂಗಳೂರು ಘನತ್ಯಾಜ್ಯ ನಿರ್ವಾಹಣಾ ನಿಯಮತ (ಕರ್ನಾಟಕ ಸರ್ಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಂಟಿ ಸಂಸ್ಥೆ) ರವರ ಪತ್ರ ಸಂಖ್ಯೆ : ಮುಕಾಅ/ ಆಶಾ/ ಪಿಆರ್/300/ಅ/2024-25, ದಿನಾಂಕ : 26-03-2025.
4. ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಬೆಂಗಳೂರು ಘನತ್ಯಾಜ್ಯ ನಿರ್ವಾಹಣಾ ನಿಯಮತ (ಕರ್ನಾಟಕ ಸರ್ಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಂಟಿ ಸಂಸ್ಥೆ) ರವರ ಪರಿಷ್ಕೃತ ಪತ್ರ ಸಂಖ್ಯೆ : ಮುಕಾಅ/ ಆಶಾ/ ಪಿಆರ್/300/ಅ/2024-25, ದಿನಾಂಕ : 26-03-2025.
5. ದಿನಾಂಕ : 04-04-2025 ರಂದು ನಡೆದ ಮಾನ್ಯ ಆಡಳಿತಗಾರರ ಸಭೆಯ ವಿಷಯದ ಸಂಖ್ಯೆ : 13/2025-26.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಘನ ಸರ್ಕಾರವು ಗೃಹ, ವಾಣಿಜ್ಯ, ಸಾಂಸ್ಥಿಕ ಮತ್ತು ಬೃಹತ್ ತ್ಯಾಜ್ಯ ಉತ್ಪಾದಕರಿಂದ ಬಳಕೆದಾರರ ಶುಲ್ಕ(ಸೇವಾ ಶುಲ್ಕ)ವನ್ನು ಸಂಗ್ರಹಿಸಲು ಉಲ್ಲೇಖ (01) ರನ್ವಯ ಅನುಮೋದನೆಯನ್ನು ನೀಡಿದ್ದು ಅನುಷ್ಠಾನದಲ್ಲಿನ ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತೆಗೆದುಕೊಂಡ ನಿರ್ಣಯಗಳಿಗೆ ಅನುಮೋದನೆಯನ್ನು ನೀಡಿರುತ್ತದೆ.

ಅದರಂತೆ ಗೃಹ, ವಾಣಿಜ್ಯ ಮತ್ತು ಸಾಂಸ್ಥಿಕ ತ್ಯಾಜ್ಯ ಉತ್ಪಾದಕರಿಂದ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕ (ಸೇವಾ ಶುಲ್ಕ)ವನ್ನು ದಿನಾಂಕ: 01.04.2025 ರಿಂದ ಅನ್ವಯವಾಗುವಂತೆ ಸಂಗ್ರಹಿಸಲು ಮತ್ತು ಉಲ್ಲೇಖ (01) ರಲ್ಲಿರುವಂತೆ ಶುಲ್ಕದ ವಾರ್ಷಿಕ ವೃದ್ಧಿಯನ್ನು 2026-27ನೇ ಸಾಲಿನಿಂದ ಅನುಷ್ಠಾನಗೊಳಿಸಲು ಉಲ್ಲೇಖ (5) ರಂತೆ ಮಾನ್ಯ ಆಡಳಿತಗಾರರು ಅನುಮೋದನೆ ನೀಡಿರುತ್ತಾರೆ.



CHIEF COMMISSIONER
BRUHAT BENGALURU MAHANAGAR PALIKE

ಆದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2025-26ನೇ ಆರ್ಥಿಕ ಸಾಲಿನಿಂದ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ(SWM User Fee) ವನ್ನು ಆಸ್ತಿ ತೆರಿಗೆ ಜೊತೆಯಲ್ಲಿ ಕೆಳಕಂಡಂತೆ ನಿಗಧಿಪಡಿಸಿ ಸಂಗ್ರಹಿಸುವಂತೆ ಆದೇಶಿಸಿದೆ.

| **ವಸತಿ ಉಪಯೋಗದ ಸ್ವತ್ತುಗಳಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ(SWM User Fee)** | | |
|---|---|---|
| **ಕ್ರ. ಸಂ** | **ಕಟ್ಟಡದ ವಿಸ್ತೀರ್ಣ** | **ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ / ಪ್ರತಿ ತಿಂಗಳಿಗೆ ರೂ.** |
| 1 | 600 ಚ.ಅಡಿಗಳವರೆಗೆ | ₹ 10.00 |
| 2 | 601 ಚ.ಅಡಿಗಳಿಂದ 1000 ಚ.ಅಡಿಗಳವರೆಗೆ | ₹ 50.00 |
| 3 | 1001 ಚ.ಅಡಿಗಳಿಂದ 2000 ಚ.ಅಡಿಗಳವರೆಗೆ | ₹ 100.00 |
| 4 | 2001 ಚ.ಅಡಿಗಳಿಂದ 3000 ಚ.ಅಡಿಗಳವರೆಗೆ | ₹ 150.00 |
| 5 | 3001 ಚ.ಅಡಿಗಳಿಂದ 4000 ಚ.ಅಡಿಗಳವರೆಗೆ | ₹ 200.00 |
| 6 | 4000 ಚ.ಅಡಿಗಳಿಗೂ ಮೇಲ್ಪಟ್ಟು | ₹ 400.00 |

| **ಖಾಲಿ ನಿವೇಶನ / ಭೂಮಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ(SWM User Fee)** | | |
|---|---|---|
| **ಕ್ರ. ಸಂ** | **ನಿವೇಶನ / ಭೂಮಿಯ ವಿಸ್ತೀರ್ಣ** | **ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ / ಪ್ರತಿ ಚ.ಅಡಿಗೆ ಪ್ರತಿ ವರ್ಷಕ್ಕೆ ರೂ.** |
| **1** | ಖಾಲಿ ನಿವೇಶನ / ಭೂಮಿ | ₹ 0.60 |

| **ವಸತಿಯೇತರ ಉಪಯೋಗದ ಇತರೆ ಸ್ವತ್ತುಗಳಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ(SWM User Fee)** | | |
|---|---|---|
| **ಕ್ರ.** | **ಕಟ್ಟಡದ ವಿಸ್ತೀರ್ಣ** | **ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ / ಪ್ರತಿ ತಿಂಗಳಿಗೆ ರೂ.** |
| 1 | 1000 ಚ.ಅಡಿಗಳವರೆಗೆ | ₹ 2,000.00 |
| 2 | 1001 ಚ.ಅಡಿಗಳಿಂದ 2000 ಚ.ಅಡಿಗಳವರೆಗೆ | ₹ 6,000.00 |
| 3 | 2001 ಚ.ಅಡಿಗಳಿಂದ 5000 ಚ.ಅಡಿಗಳವರೆಗೆ | ₹ 14,000.00 |
| 4 | 5001 ಚ.ಅಡಿಗಳಿಂದ 10000 ಚ.ಅಡಿಗಳವರೆಗೆ | ₹ 38,000.00 |
| 5 | 10001 ಚ.ಅಡಿಗಳಿಂದ 20000 ಚ.ಅಡಿಗಳವರೆಗೆ | ₹ 70,000.00 |
| 6 | 20001 ಚ.ಅಡಿಗಳಿಂದ 50000 ಚ.ಅಡಿಗಳವರೆಗೆ | ₹ 1,50,000.00 |
| 7 | 50001 ಚ.ಅಡಿಗಳಿಂದ 100000 ಚ.ಅಡಿಗಳವರೆಗೆ | ₹ 2,75,000.00 |
| 8 | 100001 ಚ.ಅಡಿಗಳಿಂದ 200000 ಚ.ಅಡಿಗಳವರೆಗೆ | ₹ 5,00,000.00 |
| 9 | 200001 ಚ.ಅಡಿಗಳಿಂದ 500000 ಚ.ಅಡಿಗಳವರೆಗೆ | ₹ 13,00,000.00 |
| 10 | 500000 ಚ.ಅಡಿಗಳಿಗೂ ಮೇಲ್ಪಟ್ಟು | ₹ 35,00,000.00 |

**ಸೂಚನೆ:** ಸ್ವಂತ ಮತ್ತು ಬಾಡಿಗೆ (ಮಿಶ್ರ ಉಪಯೋಗದ) ಸ್ವತ್ತುಗಳಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕವು ಆಸ್ತಿತೆರಿಗೆಯ ಶೇ.60 ಕ್ಕಿಂತ ಹೆಚ್ಚಾದ್ದಲ್ಲಿ ಶೇ.60ಕ್ಕೆ ಮಿತಿಗೊಳಿಸಲಾಗಿದೆ. ಬಾಡಿಗೆ ಉಪಯೋಗದ ಸ್ವತ್ತುಗಳಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕವು ಆಸ್ತಿತೆರಿಗೆಯ ಶೇ.30ಕ್ಕಿಂತ ಹೆಚ್ಚಾದ್ದಲ್ಲಿ ಶೇ.30 ಕ್ಕೆ ಮಿತಿಗೊಳಿಸಲಾಗಿದೆ.



CHIEF COMMISSIONER
BRUHAT BENGALURU MAHANAGAR PALIKE

| ವಸತಿಯೇತರ ಉಪಯೋಗದ ವರ್ಗ – VII ಹೋಟಲ್ ಮತ್ತು ಲಾಡ್ಜ್ ಸ್ ಉಪಯೋಗದ ಸ್ವತ್ತುಗಳಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ (SWM User Fee) | | |
|---|---|---|
| ಕ್ರ. ಸಂ | ಕಟ್ಟಡದ ವಿಸ್ತೀರ್ಣ | ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ / ಪ್ರತಿ ವರ್ಷಕ್ಕೆ ರೂ. |
| 1 | 1000 ಚ.ಅಡಿಗಳವರೆಗೆ | ₹ 4,000.00 |
| 2 | 1001 ಚ.ಅಡಿಗಳಿಂದ 2000 ಚ.ಅಡಿಗಳವರೆಗೆ | ₹ 12,000.00 |
| 3 | 2001 ಚ.ಅಡಿಗಳಿಂದ 5000 ಚ.ಅಡಿಗಳವರೆಗೆ | ₹ 28,000.00 |
| 4 | 5001 ಚ.ಅಡಿಗಳಿಂದ 10000 ಚ.ಅಡಿಗಳವರೆಗೆ | ₹ 76,000.00 |
| 5 | 10001 ಚ.ಅಡಿಗಳಿಂದ 20000 ಚ.ಅಡಿಗಳವರೆಗೆ | ₹ 1,40,000.00 |
| 6 | 20001 ಚ.ಅಡಿಗಳಿಂದ 50000 ಚ.ಅಡಿಗಳವರೆಗೆ | ₹ 3,00,000.00 |
| 7 | 50001 ಚ.ಅಡಿಗಳಿಂದ 100000 ಚ.ಅಡಿಗಳವರೆಗೆ | ₹ 5,50,000.00 |
| 8 | 100001 ಚ.ಅಡಿಗಳಿಂದ 200000 ಚ.ಅಡಿಗಳವರೆಗೆ | ₹ 10,00,000.00 |
| 9 | 200001 ಚ.ಅಡಿಗಳಿಂದ 500000 ಚ.ಅಡಿಗಳವರೆಗೆ | ₹ 26,00,000.00 |
| 10 | 500000 ಚ.ಅಡಿಗಳಿಗೂ ಮೇಲ್ಪಟ್ಟು | ₹ 70,00,000.00 |
| **ಸೂಚನೆ**: ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕವು ಆಸ್ತಿತೆರಿಗೆಯ ಶೇ.60 ಕ್ಕಿಂತ ಹೆಚ್ಚಾದ್ದಲ್ಲಿ ಶೇ.60ಕ್ಕೆ ಮಿತಿಗೊಳಿಸಲಾಗಿದೆ. | | |

| ವಸತಿಯೇತರ ಉಪಯೋಗದ ವರ್ಗ – VIII ತಾರಾ ಹೋಟಲ್ ಉಪಯೋಗದ ಸ್ವತ್ತುಗಳಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ (SWM User Fee) | | |
|---|---|---|
| ಕ್ರ. ಸಂ | ಕಟ್ಟಡದ ವಿಸ್ತೀರ್ಣ | ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕ / ಪ್ರತಿ ವರ್ಷಕ್ಕೆ ರೂ. |
| 1 | 10000 ಚ.ಅಡಿಗಳವರೆಗೆ | ₹ 95,000.00 |
| 2 | 10001 ಚ.ಅಡಿಗಳಿಂದ 20000 ಚ.ಅಡಿಗಳವರೆಗೆ | ₹ 1,75,000.00 |
| 3 | 20001 ಚ.ಅಡಿಗಳಿಂದ 50000 ಚ.ಅಡಿಗಳವರೆಗೆ | ₹ 3,75,000.00 |
| 4 | 50001 ಚ.ಅಡಿಗಳಿಂದ 100000 ಚ.ಅಡಿಗಳವರೆಗೆ | ₹ 6,87,500.00 |
| 5 | 100001 ಚ.ಅಡಿಗಳಿಂದ 200000 ಚ.ಅಡಿಗಳವರೆಗೆ | ₹ 12,50,000.00 |
| 6 | 200001 ಚ.ಅಡಿಗಳಿಂದ 500000 ಚ.ಅಡಿಗಳವರೆಗೆ | ₹ 32,50,000.00 |
| 7 | 500000 ಚ.ಅಡಿಗಳಿಗೂ ಮೇಲ್ಪಟ್ಟು | ₹ 87,50,000.00 |
| **ಸೂಚನೆ:** ಘನತ್ಯಾಜ್ಯ ನಿರ್ವಹಣಾ ಬಳಕೆದಾರರ/ಸೇವಾ ಶುಲ್ಕವು ಆಸ್ತಿತೆರಿಗೆಯ ಶೇ.60 ಕ್ಕಿಂತ ಹೆಚ್ಚಾದ್ದಲ್ಲಿ ಶೇ.60ಕ್ಕೆ ಮಿತಿಗೊಳಿಸಲಾಗಿದೆ. | | |

5.4.25

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು :**

1. ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸಿದೆ.

2. ವಿಶೇಷ ಆಯುಕ್ತರು (ಕಂದಾಯ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ, ಆಸ್ತಿತೆರಿಗೆ ತಂತ್ರಾಂಶದಲ್ಲಿ ಈ ಸಂಬಂಧ ಸೂಕ್ತ ಮಾರ್ಪಾಡು ಮಾಡಲು ಸೂಚಿಸಿದೆ.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ರವರ ಮಾಹಿತಿಗಾಗಿ ಕಳುಹಿಸಿದೆ. .
4. ಎಲ್ಲಾ ವಲಯ ಆಯುಕ್ತರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ಜಂಟಿ / ಉಪ ಆಯುಕ್ತರು (ಕಂದಾಯ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಎಲ್ಲಾ ವಲಯ ಜಂಟಿ / ಉಪ ಆಯುಕ್ತರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿಗಳು / ನೌಕರರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.